ಪಾತ್ರಗಳಲ್ಲೊಬ್ಬಳಾದ ತಿಮ್ಮಿ ಗುಡ್ಡವೊಂದರ ನೆತ್ತಿಯ ಮೇಲೆ ತನ್ನ ಗಂಡನ ನಿರೀಕ್ಷೆಯಲ್ಲಿ ಕಾಯುತ್ತಾ ಕುಳಿತಿರುತ್ತಾಳೆ. ಆಕೆಯೊಡನೆ ಸಾಕಿದ ನಾಯಿ ಬಿಟ್ಟರೆ ಮತ್ತ್ಯಾರೂ ಇಲ್ಲ. ಎದುರಲ್ಲೊಂದು ಕಲ್ಲು ಮಂಟಪವಿದೆ. ಬೆಳಗಿನಿಂದ ಸಂಜೆಯವರೆಗೂ ಕಾದು ಸುಸ್ತಾಗಿದ್ದಾಳೆ. ಒತ್ತಿ ಬರುವ ಬೇಸರ, ಆಕಳಿಕೆ, ಮಂಪರಿನೊಡನೆ ಸೆಣೆಸುತ್ತ ಆಕೆ ಕಾಲಹರಣ ಮಾಡುವಷ್ಟರಲ್ಲಿ ಸಾವಧಾನವಾಗಿ ಕತ್ತಲಾವರಿಸಿದೆ. ತಿಮ್ಮಿ ಬೆರಗಾಗಿ ನೋಡುತ್ತಾಳೆ. ಕಲ್ಲುಮಂಟಪದ ಹತ್ತಿರ ಕುದುರೆಯೊಂದು ನಿಂತಿದೆ. ಅದರ ಮೇಲೊಬ್ಬ ರಾಜಕುಮಾರ. ನೋಡನೋಡುತ್ತಿರುವಂತೆ ಎಲ್ಲಿಂದಲೋ ಓಡಿ ಬಂದ ಮದುವಣಗಿತ್ತಿಯೊಬ್ಬಳು ಆತನತ್ತ ಕೈ ಚಾಚುತ್ತಾಳೆ. ರಾಜಕುಮಾರ ಬಾಗಿ ಅವಳನ್ನೆತ್ತಿ ಕುದುರೆಯ ಮೇಲೆ ಕೂರಿಸಿಕೊಂಡು ಚಂಗನೆ ನೆಗೆದು ಮಾಯವಾಗುತ್ತಾನೆ. ಕಣ್ಣು ತೆರೆದುಕೊಂಡಿರುವಾಗಲೇ ಕ್ಷಣಾರ್ಧದಲ್ಲಿ ಕಂಡು ಮರೆಯಾದ ಆ ದೃಶ್ಯಕ್ಕೆ ಬೆಚ್ಚಿ ಕಂಪಿಸುತ್ತಾಳೆ ತಿಮ್ಮಿ.

ತಿಮ್ಮಿ ಆ ಘಟನೆಯನ್ನು ಅಲ್ಲಿ ಹೇಗೆ ಕಂಡಳು ಅನ್ನುವುದಕ್ಕೆ ಮೂರು ಕಾರಣಗಳನ್ನು ಊಹಿಸುತ್ತಾರೆ ಕುವೆಂಪು. ಆ ಕಲ್ಲುಮಂಟಪ ಬಹು ಹಿಂದೆ ನಗರ ಸಂಸ್ಥಾನದ ಸೈನ್ಯದ ಕಾವಲ್ದಾಣವಾಗಿತ್ತು. ಆಗ ನಡೆದಿದ್ದ ಯಾವುದಾದರೂ ಒಂದು ಘಟನೆ, ಆ ಅನನ್ಯ ಗಳಿಗೆ ಹಾಗೂ ಪರಿಸರದಲ್ಲಿ ತಿಮ್ಮಿಯ ಸ್ವಪ್ರಜ್ಞೆಯ ಪ್ರಭಾವದಿಂದ ಪುನಃಸ್ಮೃತಿಯಾಗಿ ಆವಿರ್ಭವಿಸಿ ಅವಳಿಗೆ ದೃಗ್ಗೋಚರವಾಗಿರಬಹುದು. ಅಥವಾ, ಆಕೆ ಆ ಸಂದರ್ಭದಲ್ಲಿ ಮದುಮಕ್ಕಳಿಬ್ಬರನ್ನು ನೆನೆಯುತ್ತಾ ಕುಳಿತಿದ್ದಳಾದ್ದರಿಂದ, ಅವರೇ ಆಕೆಯ ಅರ್ಧಜಾಗ್ರತ್ ಪ್ರಜ್ಞೆಯಲ್ಲಿ ಪ್ರತಿಮಿತವಾಗಿ ಕಾಣಿಸಿಕೊಂಡಿರಬಹುದು. ಅಥವಾ, ಆಕೆ ಒಡೆಯನ ಮನೆಯಲ್ಲಿ ರಾತ್ರಿಯೆಲ್ಲ ಕೆಲಸ ಮಾಡುತ್ತಿರುವ ಸಂದರ್ಭದಲ್ಲಿ ಜೊತೆಗಾರರು ಸರದಿಯ ಮೇಲೆ ಹೇಳುತ್ತಿದ್ದ ಪುರಾಣದ ಕಥೆಗಳನ್ನು ಕೇಳಿದ್ದರ ಪರಿಣಾಮವೂ ಇರಬಹುದು. ಹೀಗೆ ಮೂರು ಕಾರಣಗಳನ್ನು ನೀಡಿದ್ದರೂ, ಮೊದಲನೆಯ ಕಾರಣದ ಸಾಧ್ಯತೆಯನ್ನೇ ಅವರು ಹೆಚ್ಚು ಪ್ರತಿಪಾದಿಸುವುದು ಓದುಗನಿಗೆ ಸ್ಪಷ್ಟವಾಗುತ್ತದೆ. ಯಾಕೆಂದರೆ, ರಾಜಕುಮಾರ ಕುದುರೆಯೇರಿ ಹೋದ ಸನ್ನಿವೇಶವನ್ನು ತಿಮ್ಮಿ ದಿಗ್ಭ್ರಾಂತಳಾಗಿ ನೋಡುತ್ತಿರುವ ಅದೇ ವೇಳೆ, ಇದುವರೆಗೂ ಸುಮ್ಮನೆ ಮಲಗಿದ್ದ ನಾಯಿ ಕಟ್ಟಿದ ಬಳ್ಳಿ ಹರಿದುಹೋಗುವಂತೆ ಜಗ್ಗುತ್ತಾ ಭಯಂಕರವಾಗಿ ಕುದುರೆ ಹೋದ ದಿಕ್ಕನ್ನೇ ನೋಡುತ್ತ ಬೊಗಳುತ್ತದೆ.

ಇದೊಂದು ಉದಾಹರಣೆಯಷ್ಟೇ. ಜಗತ್ತಿನ ಹಲವು ಪ್ರಸಿದ್ಧ ಲೇಖಕರು ತಮ್ಮ ಕೃತಿಗಳಲ್ಲಿ ಇಂಥಹ ಮಾಯಾ ಸಾದೃಶ್ಯಗಳನ್ನು ಕಟ್ಟಿಕೊಟ್ಟಿದ್ದಾರೆ. ಹಾಗೂ ಅದು ಕೇವಲ ಮನುಷ್ಯನ ಭ್ರಮೆಯಷ್ಟೇ ಅಲ್ಲ ಎನ್ನುವುದನ್ನೂ ನೇರವಾಗಿ (ಹಾಗೂ ಪರೋಕ್ಷವಾಗಿ) ಅರುಹಿದ್ದಾರೆ. ಜಯಂತ ಕಾಯ್ಕಿಣಿಯವರ 'ಹೊಸ್ತಿಲು' ಎನ್ನುವ ಕಥೆಯಲ್ಲಿ – ಮುದಿವಯಸ್ಕ ಅವಿವಾಹಿತನೋರ್ವನಿಗೆ, ತನ್ನ ಗುಜರಿ ಅಂಗಡಿಯ ಮಾಸಿದ ನಿಲುವುಗನ್ನಡಿಯಲ್ಲಿ ಸುಂದರ ತರುಣಿಯೊಬ್ಬಳು ಕಾಣಿಸಿಕೊಳ್ಳುವ ಪ್ರಸಂಗ ಕೂಡಾ ಇದೇ ಹಿನ್ನೆಲೆಯಲ್ಲಿ ರಚಿತವಾದದ್ದು ಎನ್ನುವುದು ನನ್ನ ಅನಿಸಿಕೆ.

ಈ ವಿಷಯವನ್ನು ಅವಲೋಕಿಸ ಹೊರಟರೆ ಎರಡು ಮುಖ್ಯ ಪ್ರಶ್ನೆಗಳು ಎದುರಾಗುತ್ತವೆ. ಈ ಭೂಮಿಯ ಮೇಲಿನ ಪ್ರತಿ ಸ್ಥಳಕ್ಕೂ ಅದರದೇ ಆದ ಒಂದು ವಿಶಿಷ್ಟ ಪ್ರಾಣಮಯ ಸೂಕ್ಷ್ಮಪ್ರಜ್ಞಿತತ್ವ ಎಂಬುದಿದೆಯೇ? ಅನುಭವಿಸಬಲ್ಲ ಸೂಕ್ಷ್ಮಮನಸ್ಸುಳ್ಳವನಿಗೆ, ಆಯಾ ಜಾಗದಲ್ಲಿ, ಆಯಾ ಸಂದರ್ಭದಲ್ಲಿ, ವಿಶೇಷ ರೂಪದಲ್ಲಿ ಅದು ಇಂದ್ರಿಯಗಳಿಗೆ ಸಂವೇದಿಯಾಗಿ ದಕ್ಕಬಲ್ಲದೇ? (ಅದು ದೃಶ್ಯರೂಪವೇ ಆಗಬೇಕಿಲ್ಲ, ಯಾವುದೋ ಒಂದು ಸ್ಪರ್ಶ, ಪರಿಮಳ, ಗ್ರಹಿಕೆಯೂ ಆಗಿರಬಹುದು.) ಪುಟ್ಟಪ್ಪನವರಿಗೆ ಕವಿಶೈಲ, ಬೇಂದ್ರೆಗೆ ಸಾಧನಕೇರಿ, ಕಾರಂತರಿಗೆ ಕಡಲತೀರ, ಜಯಂತರಿಗೆ ಮುಂಬಯಿಯಿದ್ದಂತೆ, ಪ್ರತಿ ವ್ಯಕ್ತಿಗೂ ಅವರದೇ ಆದ ಘಟಿಕಾಸ್ಥಳವೆಂಬುದು ಇರಬಹುದೇ?

ಎರಡನೆಯದು, ಸಮಾನಾಂತರ ವಿಶ್ವವೊಂದು ನಮ್ಮ ಮಗ್ಗುಲಲ್ಲೇ ಇದ್ದಿರಬಹುದಾದ ಸಾಧ್ಯತೆ.